**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 884 /2019</u>**

ದಿನಾಂಕಃ **06.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ರಾಜಾಭೋವಿ | ಚಾಸಾ-2, ಪ್ರಾಸ.-2 |
| ತಂದೆಯ ಹೆಸರುಃ | ತಿಮ್ಮಾಭೋವಿ | |
| ವಯಸ್ಸು ಃ | 44 ವರ್ಷ | |
| ಉದ್ಯೋಗ ಃ | ವಾಟರ್ ಮ್ಯಾನ್ | |
| ವಾಸ ಃ | ದೋಗಿಹಳ್ಳಿ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-1 ಮತ್ತು 3 ರವರು ನನಗೆ ಗೊತ್ತು. ಮೃತ ವ್ಯಕ್ತಿ ನನಗೆ ಗೊತ್ತು. 2018 ನೇ ಸಾಲಿನಲ್ಲಿ ಬೆಳಗ್ಗೆ 8.30 ಗಂಟೆ ಸಮಯದಲ್ಲಿ ದೋಗಿಹಳ್ಳಿಯ ತಿಮ್ಮಣ್ಣನ ಅಂಗಡಿ ಬಳಿ ನಿಂತು ನೀರು ಬಿಡುತ್ತಿದ್ದೆ. ಅಂಗಡಿಯ ಬಳಿ ಬೈಕ್ ನಿಲ್ಲಿಸಿ ನಿಂತಿದ್ದ ಮಧು ರವರಿಗೆ ಅಜ್ಜಂಪುರ ಕಡೆಯಿಂದ ರಸ್ತೆಯ ಬಲಭಾಗಕ್ಕೆ ಬಂದು ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಈ ವಿಚಾರವನ್ನು ನಾನು ಚಾಸಾ-1 ರವರಿಗೆ ದೂರವಾಣಿ ಮೂಲಕ ತಿಳಿಸಿರುತ್ತೇನೆ. ಸಾರ್ವಜನಿಕರು ಮಧುಸೂದನ್ ರವರಿಗೆ ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮಧುಸೂದನ್ ರವರಿಗೆ ಯಾವ ರೀತಿ ಗಾಯವಾಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ನಂತರ ಮಧುಸೂದನ್ ರವರು ಮರಣ ಹೊಂದಿರುವ ವಿಚಾರ ತಿಳಿಯಿತು. ನ್ಯಾಯಾಲಯದ ಮುಂದಿರುವ ಆರೋಪಿಯು ಆ ದಿನ ಜೀಪನ್ನು ಚಲಾಯಿಸುತ್ತಿದ್ದ. ಈ ಸಂಬಂಧ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 08.12.2018 ರಂದು ಬೆಳಗ್ಗೆ 8.30 ಗಂಟೆ ಸಮಯಕ್ಕೆ ನಾನು ಚಾಸಾ-3 ರವರ ಅಂಗಡಿ ಬಳಿ ನಿಂತಿದ್ದಾಗ ಮಧುಸೂದನ್ ರವರು ನಮ್ಮನ್ನು ಮಾತನಾಡಿಸುತ್ತಾ ನಿಂತಿದ್ದು, ಅಜ್ಜಂಪುರ ಕಡೆಯಿಂದ ಬಂದ ಕೆಎ-03 ಎಂ-0770 ಜೀಪನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಬದಿಯಲ್ಲಿ ನಿಂತಿದ್ದ ಮಧುಸೂದನ್ ರವರ ಹಿಂಭಾಗಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದ ವಿಚಾರವನ್ನು ತಿಳಿದು ಚಾಸಾ-1 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿ. ಅಪಘಾತದಿಂದ ಮಧುಸೂದನ್ ರವರ ತಲೆಗೆ ಎಡಕಾಲಿಗೆ ತೀವ್ರ ಗಾಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮಧುಸೂದನ್ ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗ ಮತ್ತು ಮಣಿಪಾಲ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂದರೆ ಯಾವ ರೀತಿ ಮೃತಪಟ್ಟಿರುತ್ತಾರೆ ಎಂದು ಗೊತ್ತಿಲ್ಲ ಆದರೆ ಮೃತಪಟ್ಟಿರುವ ವಿಚಾರ ತಿಳಿಯಿತು ಎಂದು

ನುಡಿಯುತ್ತಾರೆ.

<u>ಪಾಟೀಸವಾಲುಃ ಶ್ರೀ ಪಿ ಆರ್ ಸಿ  ಆರೋಪಿ ಪರ ವಕೀಲರಿಂದಃ</u>

ನಾನು ವಾಟರ್ ಮ್ಯಾನ್ ಆಗಿ ಕೆಲಸ ಮಾಡುತ್ತಿರುತ್ತೇನೆ. ಬೆಳಗ್ಗೆ 7.30 ರಿಂದ 9.30 ರವರೆಗೂ ನೀರು ಬಿಡುವ ಕೆಲಸದಲ್ಲಿ ನಿರತನಾಗಿರುತ್ತೇನೆ ಎಂದರೆ ಸರಿ. 7.30 ಗಂಟೆಗೆ ನೀರಿನ ಮೈನ್ ಗೇಟ್ ಬಿಟ್ಟು 9.30 ಗಂಟೆಗೆ ಕೊನೆ ಗೇಟ್ ಬಿಡುತ್ತೀರಿ ಎಂದರೆ ಸಾಕ್ಷಿ ನಾನು ಚಾಸಾ-3 ರವರ ಅಂಗಡಿ ಪಕ್ಕದಲ್ಲಿ ನಿಂತಿದ್ದೆ ಎಂದು ನುಡಿಯುತ್ತಾರೆ. ಮೃತ ವ್ಯಕ್ತಿ ನನ್ನನ್ನು ಬೆಳಗ್ಗೆ 7.30 ಗಂಟೆಗೆ ಮಾತನಾಡಿಸಿ ಹೊರಟು ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಾನು 8.30 ಗಂಟೆ ಸಮಯಕ್ಕೆ 4 ನೇ ಪಾಯಿಂಟ್ ಬಳಿ ನೀರು ಬಿಡುತ್ತಾ ನಿಂತಿದ್ದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಚಾಸಾ-3 ರವರ ಅಂಗಡಿ ಬಳಿ ನಿಂತಿದ್ದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ದೋಷಾರೋಪಣಾ ಪಟ್ಟಿಯೊಂದಿಗೆ ಹಾಜರುಪಡಿಸಿರುವ ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ತೋರಿಸಲಾಗಿ ಸಾಕ್ಷಿಗೆ ಇದೇ ಜಾಗದಲ್ಲಿ ಅಪಘಾತವಾಗಿದೆ ಎಂದು ಆರೋಪಿ ಪರ ವಕೀಲರು ಸಲಹೆ ನೀಡಿದ್ದು, ಸಾಕ್ಷಿ ಸದರಿ ಸಲಹೆ ಒಪ್ಪಿ ಛಾಯಾಚಿತ್ರದಲ್ಲಿ ಕಂಡುಬರುವ ಜಾಗದಲ್ಲೇ ಅಪಘಾತವಾಗಿದೆ ಎಂದು ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಜಾಗವು ಅಜ್ಜಂಪುರ ಕಡೆಯಿಂದ ಬರುವಾಗ ರಸ್ತೆಯ ಬಲಭಾಗದಲ್ಲಿ ಮತ್ತು ರಸ್ತೆಯ ಎಡಭಾಗದಲ್ಲಿರುತ್ತದೆ ಎಂದರೆ ಸರಿ. ನಿಡಿ-1 ರಲ್ಲಿರುವ ಸ್ಥಳವು ಬೀರೂರು ಕಡೆಯಿಂದ ಬರುವಾಗ ರಸ್ತೆಯ ಎಡಭಾಗದಲ್ಲಿರುತ್ತದೆ ಎಂದರೆ ಸರಿ. ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ನಾನು ನೀರು ಬಿಡುವ ಕೆಲಸದಲ್ಲಿ ಮಗ್ನನಾದ ಕಾರಣ ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಿಡಿ-1 ರ ಛಾಯಾಚಿತ್ರದಲ್ಲಿ ಯಾವುದೇ ಚರಂಡಿ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರಶ್ನೆಃ ನೀವು ಅಪಘಾತವನ್ನು 9.15 ಗಂಟೆಗೆ ನೋಡಿ ಅಲ್ಲಿಂದ ಹೊರಟುಹೋಗಿರುತ್ತೀರಿ.

ಉತ್ತರ ಃ ನಾನು 8.30 ಗಂಟೆಗೆ ಅಪಘಾತವಾಗಿರುವುದನ್ನು ನೋಡಿರುತ್ತೇನೆ.

ನಾನು ಅಪಘಾತವಾದ ನಂತರ ಸುಮಾರು 20 ನಿಮಿಷಗಳ ಕಾಲ ಸ್ಥಳದಲ್ಲಿದ್ದೆ. ನಾನು ಚಾಸಾ-1 ರವರ ದೂರವಾಣಿ ಸಂಖ್ಯೆಯನ್ನು ಪಡೆಯಲು ಬೇರೆಯವರ ಮನೆಗೆ ಹೋಗಿರುತ್ತೇನೆ ಎಂದರೆ ಸಾಕ್ಷಿ ಚಾಸಾ-1 ರವರ ದೂರವಣಿ ಸಂಖ್ಯೆ ನನ್ನ ಬಳಿ ಇತ್ತು ಎಂದು ನುಡಿಯುತ್ತಾರೆ. ನಿಡಿ-1 ರ ಛಾಯಾಚಿತ್ರದಲ್ಲಿ ನಾನು ಇಲ್ಲಾ ಎಂದರೆ ಸರಿ. ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.